# ನೋ ಒನ್ ಕ್ಯಾನ್ ಬೀಟ್ ವಿದ್ಯಾ!



ವಿದ್ಯಾ ಬಾಲನ್ ಮತ್ತು ರಾಣಿ ಮುಖರ್ಜಿ ಇಬ್ಬರೂ ಬಾಲಿವುಡ್‌ನ ಅತ್ಯಂತ ಪ್ರತಿಭಾವಂತ ನಟಿಯರು. ಈ ಹಿಂದೆ ಅನೇಕ ಸಿನಿಮಾಗಳಲ್ಲಿ ಇಬ್ಬರೂ ಇದನ್ನು ಸಾಬೀತುಪಡಿಸಿದ್ದಾರೆ. ವಿದ್ಯಾ ಅಭಿನಯದ ಪಾ ಮತ್ತು ರಾಣಿ ಅಭಿನಯದ ಬ್ಲ್ಯಾಕ್ ಎರಡೂ ಅಭಿನಯದ ಮಟ್ಟಿಗೆ ಮೈಲುಗಲ್ಲುಗಳೇ. ಈ ಇಬ್ಬರೂ ಪ್ರತಿಭಾವಂತರು ಒಂದೇ ಚಿತ್ರದಲ್ಲಿ ಸವಾಲಿನ ಪಾತ್ರಗಳನ್ನು ಮಾಡುತ್ತಾರೆಂಬ ಸುದ್ದಿ ಹಬ್ಬಿದಾಗ ಬಾಲಿವುಡ್‌ನಲ್ಲಿ ದೊಡ್ಡ ಕುತೂಹಲ ಏರ್ಪಟ್ಟಿದ್ದು ನಿಜ. 'ನೋ ಒನ್ ಕಿಲ್ಡ್ ಜೆಸ್ಸಿಕಾ' ಎಂಬ ಚಿತ್ರ ಇಬ್ಬರ ಪ್ರತಿಭೆಯನ್ನೂ ಪುಟಕ್ಕಿಟ್ಟ ಚಿನ್ನದಂತೆ ಹೊಳಪುಗೊಳಿಸಿದೆ. ಆದರೆ ಬಾಲಿವುಡ್ ಪಂಡಿತರ ಪ್ರಕಾರ ವಿದ್ಯಾ ಒಂದು ಕೈ ಮೇಲು ಎನ್ನುವಂತೆ ನಟಿಸಿದ್ದಾಳೆ.

ಜೆಸ್ಸಿಕಾ.. ಚಿತ್ರದ ಸಬ್ರೀನಾ ಲಾಲ್ ಪಾತ್ರ ವಿದ್ಯಾಳನ್ನು ಮತ್ತೊಮ್ಮೆ ಪ್ರಚಾರದ ಬೆಳಕಲ್ಲಿ ನಿಲ್ಲಿಸಿದೆ. 'ನೈಜ ಸಬ್ರೀನಾಗೂ ಈ ಪಾತ್ರಕ್ಕೂ ಹೋಲಿಕೆ ಏನಿಲ್ಲ. ಬಾರ್ ಗರ್ಲ್ ಕೊಲೆಯ ನೈಜ ಘಟನೆಯನ್ನೇ ಆಧರಿಸಿದ್ದರೂ ಚಿತ್ರದಲ್ಲಿ ಸಿನಿಮೀಯ ಅಂಶಗಳು ಸಾಕಷ್ಟಿವೆ' ಎನ್ನುತ್ತಾಳೆ ವಿದ್ಯಾ. ಸದ್ಯಕ್ಕೆ ಟಿವಿ ಮತ್ತು ಎಫ್‌ಎಂ ಚಾನೆಲ್‌ಗಳಲ್ಲಿ ವಿದ್ಯಾ ಹಾಟ್ ಫೇವರೆಟ್. 'ನಿಮಗೆ ರಾಜ್‌ಕುಮಾರ್ ಸಂತೋಷಿ ಇಷ್ಟಾನಾ.. ಅಥವಾ ರಾಜ್‌ಕುಮಾರ್ ಗುಪ್ತಾ (ಜೆಸ್ಸಿಕಾ..ದ ನಿರ್ದೇಶಕ) ಇಷ್ಟಾನಾ..?' ಎಂದು ಕೇಳಿದರೆ, ನಗುತ್ತಾ 'ರಾಜ್‌ಕುಮಾರ್' ಎಂದು ಉತ್ತರಿಸುವಷ್ಟು ಬುದ್ಧಿವಂತೆ ವಿದ್ಯಾ.

ವಿದ್ಯಾಳ ಹೆಗ್ಗಳಿಕೆಯೆಂದರೆ ಇಮೇಜಿನ ಹಂಗು ತೊರೆದು ಸವಾಲಿನ ಪಾತ್ರಗಳನ್ನೆಲ್ಲ ಒಪ್ಪಿಕೊಂಡದ್ದು. ಪರಿಣೀತಾ, ಪಾ, ಇಷ್ಕಿಯಾಂ– ಹೀಗೆ ಎಲ್ಲ ಚಿತ್ರಗಳೂ ಅದಕ್ಕೆ ಸಾಕ್ಷಿಯಾಗಿವೆ. ಪಾ..ನಲ್ಲಿ ಅಮಿತಾಭ್ ತಾಯಿಯ ಪಾತ್ರ ಮಾಡಿದ್ದು, ಇಷ್ಕಿಯಾಂ ನಲ್ಲಿ ಸ್ವಚ್ಛಂದ ಹುಡುಗಿಯ ಪಾತ್ರ ನಿರ್ವಹಿಸಿದ್ದು ಎರಡೂ ಆಕೆಯ ಪ್ರತಿಭೆಯನ್ನು ಅನಾವರಣಗೊಳಿಸಿದೆ. ಇಂತಹ ಪಾತ್ರಗಳನ್ನು ಕತ್ರೀನಾ ಆಗಲೀ ಕರೀನಾ ಆಗಲೀ ನಿಭಾಯಿಸುವುದು ಕಷ್ಟ.

ಸದ್ಯಕ್ಕೆ ವಿದ್ಯಾ ನಿರ್ವಹಿಸುತ್ತಿರುವ ಇನ್ನೆರಡು ಪಾತ್ರಗಳೂ ಹೀಗೆಯೇ ಇವೆ. 'ಡರ್ಟಿ ಪಿಕ್ಚರ್'ನಲ್ಲಿ ದಕ್ಷಿಣದ ಒಂದು ಕಾಲದ ಸೆಕ್ಸೀ ನಟಿ ಸಿಲ್ಕ್ ಸ್ಮಿತಾಳ ಪಾತ್ರವನ್ನು ವಿದ್ಯಾ ನಿರ್ವಹಿಸುತ್ತಿದ್ದಾಳೆ. 1996ರಲ್ಲಿ ಖ್ಯಾತಿಯ ಉತ್ತುಂಗದಲ್ಲಿರುವಾಗಲೇ 35ರ ಹರೆಯದಲ್ಲಿ ಆತ್ಮಹತ್ಯೆ ಮಾಡಿಕೊಂಡವಳು ಸಿಲ್ಕ್ ಸ್ಮಿತಾ. ಅದನ್ನು ಕೊಲೆ ಎನ್ನುವವರೂ ಇದ್ದಾರೆ. ಸಿಲ್ಕ್ ಮಾದರಿಯಲ್ಲಿ ಮಾದಕ ಕಣ್ಣುಗಳಿಲ್ಲದ ವಿದ್ಯಾ ಈ ಪಾತ್ರಕ್ಕೆ ಹೇಗೆ ನ್ಯಾಯ ಸಲ್ಲಿಸುತ್ತಾಳೆ ಎನ್ನುವುದು ಕುತೂಹಲಕರ.

ಇನ್ನೊಂದು ಚಿತ್ರ ಸುಜಯ್ ಘೋಷ್ ನಿರ್ದೇಶನದ 'ಕಹಾನಿ'. ಲಂಡನ್ನಿನಿಂದ ಭಾರತಕ್ಕೆ ಗಂಡನನ್ನು ಹುಡುಕಿಕೊಂಡು ಬರುವ ಗರ್ಭಿಣಿ ಹೆಂಗಸೊಬ್ಬಳ ಕಥಾನಕವದು. ವೈವಿಧ್ಯಮಯ ಹಾಗೂ ಸವಾಲಿನ ಪಾತ್ರಗಳೆಲ್ಲವೂ ವಿದ್ಯಾಳನ್ನು ಹುಡುಕಿಕೊಂಡು ಬರುತ್ತಿರುವಂತಿದೆ. ಇಂತಹ ಪಾತ್ರಗಳಲ್ಲಿ 'ನೋ ಒನ್ ಕ್ಯಾನ್ ಬೀಟ್ ವಿದ್ಯಾ' ಎಂದು ಖಚಿತವಾಗಿ ಹೇಳಬಹುದು.

■ ಬಿಂದು